ಶ್ರೀ ಎಸ್. ಶಫಿ ಅಹಮದ್ : ಅಧ್ಯಕ್ಷರೆ, ಕಳೆದ ಒಂದು ವರ್ಷದಿಂದ ಈ ರೀತಿ ಕೊಟ್ಟಿರುವಂತಹ ರೇಷನ್ ಕಾರ್ಡ್ಸ್‌ಗಳಿಗೆ ರೇಷನ್ ಕೊಟ್ಟಿಲ್ಲ. ಸನ್ಮಾನ್ಯ ಸಚಿವರು ಕೊಟ್ಟಿರುವ ಕಾರ್ಡಿನ ಅಲಾಟ್‌ಮೆಂಟಿನಲ್ಲಿ ಎಲ್ಲರಿಗೂ ವಿತರಣೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಹೊಸದಾಗಿ ಏನು ರೇಷನ್ ಕಾರ್ಡ್ ಕೊಟ್ಟಿದ್ದಾರೆ, ಇದುವರೆಗೂ ಒಬ್ಬರಿಗೂ ರೇಷನ್ ಒದಗಿಸಿಲ್ಲ. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿಯೂ ಸಾಮಾನ್ಯ ಕಲರ್ಸ್ ಕಾರ್ಡ್ಗೆ ಹಾಗೂ ಟ್ರೈ ಕಲರ್ಸ್ ಕಾರ್ಡ್ಗೆ ರೇಷನ್ ಸರ್ಕಾರದಿಂದ ಏನು ಕೊಡಬೇಕಾಗಿತ್ತು ಅದನ್ನು ಕೊಟ್ಟಿಲ್ಲ. ಕಳೆದ ಒಂದು ವರ್ಷದಿಂದ ನಾನು ಒತ್ತಾಯ ಮಾಡುತ್ತಿದ್ದೇನೆ. ಆದರೂ ಸಹ ಇವತ್ತಿನ ತನಕ ರೇಷನ್ ವಿತರಣೆ ಆಗಿಲ್ಲ. ಬಹಳ ಮುಖ್ಯವಾಗಿ. ಅರ್ಬನ್ ಏರಿಯಾದಲ್ಲಿ ಸ್ಲಮ್ಸ್ ಏನು ಇವೆ ಅಲ್ಲಿ ಹರಿಜನರಿಗೆ ಟ್ರೈ ಕಲರ್ಸ್ ಕೊಡಬೇಕಾಗಿತ್ತು. ಒಂದು ವರ್ಷದ ಹಿಂದೆಯೂ ಸಹ ಸದನದಲ್ಲಿ ಸಚಿವರು ಆಶ್ವಾಸನೆ ಕೊಟ್ಟಿದ್ದರು. ರೇಷನ್ ಕಾರ್ಡ್ಸ್ ಕೊಡಿಸಿಕೊಡುತ್ತೇವೆ ಎಂದು ತಿಳಿಸಿದ್ದರೂ ಕೊಡಿಸಲಿಲ್ಲ. ಅತಿ ಶೀಘ್ರದಲ್ಲಿ ಈಗಲಾದರೂ ತಾವು ಕೊಡಿಸಿಕೊಡುತ್ತೀರಾ ಎಂದು ತಮ್ಮಿಂದ ಉತ್ತರವನ್ನು ಬಯಸುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆದಷ್ಟು ಶೀಘ್ರವಾಗಿ ಕೊಡಿಸುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ : 65ನೇ ಪ್ರಶ್ನೆಯನ್ನು ಸಂಸ್ಕೃತಿ ಸಚಿವರಿಗೆ ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಸಚಿವರು ಇಲ್ಲ, ಆ ನಂತರ ಕರೆಯಬಹುದು.

ಅಧ್ಯಕ್ಷರು : ಆತ್ಮಾನಂದ ಅವರೇ, ನಿಮ್ಮ ಪ್ರಶ್ನೆಯನ್ನು ಅನಂತರ ತೆಗೆದು ಕೊಳ್ಳುತ್ತೇನೆ.

ಅಭಿವೃದ್ಧಿ ಕಾಮಗಾರಿಗಳಿಗೆ ಹಣ ಬಿಡುಗಡೆ

66 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ); ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಳೆದ 3 ತಿಂಗಳುಗಳಲ್ಲಿ ರಾಜ್ಯದ ಬೊಕ್ಕಸದಿಂದ ವಿವಿಧ ಇಲಾಖೆಗಳಿಗೆ (ನೀರಾವರಿ, ಕಾಮಗಾರಿ, ವಿದ್ಯುಚ್ಛಕ್ತಿ, ಗ್ರಾಮಿಣಾಭಿವೃದ್ಧಿ ಮತ್ತು ವಸತಿ), ಅಭಿವೃದ್ಧಿ ಕೆಲಸಗಳಿಗಾಗಿ ಬಿಡುಗಡೆಯಾಗಿರುವ ಹಣ ಎಷ್ಟು?

ಆ. ಆ ಇಲಾಖೆಗಳಿಗೆ ಸಂಬಂಧಪಟ್ಟಂತೆ ಗುತ್ತಿಗೆದಾರರಿಗೆ ಮತ್ತು ಫಲಾನುಭವಿಗಳಿಗೆ ಬಾಕಿ ಇರುವ ಹಣ ಎಷ್ಟು?

ಇ. ಆ ಹಣವನ್ನು ಬಿಡುಗಡೆ ಮಾಡಲು ಆಗಾಗ್ಗೆ ತಾಲ್ಲೂಕು ಮತ್ತು ಜಿಲ್ಲಾ ಯೋಜನೆಗಳಿಗೆ ನಿರ್ಬಂಧನೆಗಳನ್ನು ಹಾಕುತ್ತಿರುವುದು ನಿಜವೇ ಹಾಗೂ ಆದಕ್ಕೆ ಕಾರಣಗಳೇನು?

ಶ್ರೀ ಎಂ.ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು)

ಅ.

	(ಲಕ್ಷ ರೂ.ಗಳಲ್ಲಿ)
1. ನೀರಾವರಿ	13957.18
2. ಕಾಮಗಾರಿ	4024.86
3. ಇಂಧನ	600.00
4. ಗ್ರಾಮಿಣಾಭಿವೃದ್ಧಿ	33720.77

5. ವಸತಿ	2850.00
ಒಟ್ಟು	55152.81
ಆ.	(ಲಕ್ಷ ರೂ.ಗಳಲ್ಲಿ)
1. ನೀರಾವರಿ ಇಲಾಖೆ	13,969.39
2. ಕಾಮಗಾರಿ ಇಲಾಖೆ	4,950.17
ಒಟ್ಟು	18,919.56

ಇ. ತಿಂಗಳಿನ ಬೇರೆ ಬೇರೆ ದಿನಗಳಲ್ಲಿ ಹಾಗೂ ಆರ್ಥಿಕ ವರ್ಷದ ಬೇರೆ ಬೇರೆ ತಿಂಗಳುಗಳಲ್ಲಿ ರಾಜ್ಯದ ಬೊಕ್ಕಸಕ್ಕೆ ಜಮೆ ಆಗುವ ಆದಾಯವು ಒಂದೇ ರೀತಿ ಇರುವುದಿಲ್ಲ. ಭಾರತೀಯ ರಿಜರ್ವ ಬ್ಯಾಂಕ್ ಹಾಕಿರುವ ಆರ್ಥಿಕ ಮಾರ್ಗೋಪಾಯ ಸೂತ್ರಗಳಿಗೆ ಅನುವಾಗುವಂತೆ ರಾಜ್ಯ ಸರ್ಕಾರದ ವೆಚ್ಚಗಳನ್ನು ನಿಯಂತ್ರಿಸಬೇಕಾದ ಅವಶ್ಯಕತೆ ಇದೆ. ಇಷ್ಟರ ಮಟ್ಟಿಗೆ ಮಾತ್ರ ಖಜಾನೆಯಿಂದ ಆಗುವ ಪಾವತಿಗಳನ್ನು ನಿಯಂತ್ರಿತಗೊಳಿಸಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮೂರು ಉಪ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ಮೊದಲನೆಯದಾಗಿ ಅವರುಪ 18 ಕೋಟಿ ರೂಪಾಯಿ ಬಾಕಿ, ಕಾಮಗಾರಿ ಮತ್ತು ನೀರಾವರಿ ಇಲಾಖೆಯಲ್ಲಿ ಇರತಕ್ಕದ್ದರ ಬಗ್ಗೆ ಹೇಳಿದ್ದಾರೆ. ಕಾಮಗಾರಿ ಮತ್ತು ನೀರಾವರಿ ಇಲಾಖೆಗೆ 18 ಕೋಟಿ ರೂಪಾಯಿ.

ಮಾತ್ರ ಬಾಕಿ ಇರತಕ್ಕದ್ದು, ಗುತ್ತಿಗೆದಾರರಿಗೆ ಮತ್ತು ಫಲಾನುಬವಿಗಳಿಗೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಯಾವ ದಿನದ್ದು ಬಾಕಿ ಎಂದು ನನಗೆ ಬೇಕು. Pending upto which date? ಇದು ಒಂದು. ಕಳೆದ ಅಧಿವೇಶನದಲ್ಲಿ ಸರ್ಕಾರದಿಂದ ನಮಗೆ ಉತ್ತರ ಬಂದಿದೆ. ಮಾನ್ಯ ಅಧ್ಯಕ್ಷರೆ, ಸದನ ನಡೆಯದೇ ಹೋದರೂ ಸಹ ನನಗೆ ಬಂದಿರತಕ್ಕ ಉತ್ತರದಲ್ಲಿ ನೀರಾವರಿ ಮತ್ತು ಕಾಮಗಾರಿ ಇಲಾಖೆಯಲ್ಲಿ 145 ಕೋಟಿ ರೂಪಾಯಿಯಷ್ಟು ಗುತ್ತಿಗೆದಾರರಿಗೆ ಬಾಕಿ ಇದೆ ಎಂದು ನನಗೆ ಉತ್ತರ ಬಂದಿದೆ. ಹಾಗಾದರೆ 145 ರೂಪಾಯಿಗಳು ಬಾಕಿ ಇದೆಯಲ್ಲ ಅದನ್ನು ಈಗಗಲೇ ಬಿಡುಗಡೆ ಮಾಡಿದ್ದೀರಾ? ಇದು ಎರಡನೆಯ ಪ್ರಶ್ನೆ. ಮೂರನೆಯದು ಆಶ್ರಯ ಯೋಜನೆಯಲ್ಲಿ ಇಡೀ ವರ್ಷದಲ್ಲಿ 85 ಸಾವಿರ ಮನೆಗಳಿಗೆ ಇವರು ಬಿಡುಗಡೆ ಮಾಡಿರತಕ್ಕದ್ದು 30 ಕೋಟಿ ರೂಪಾಯಿ. ನಿಮಗೆ ಇನ್ನೂ 50 ಕೋಟಿ ರೂಪಾಯಿ ಬಿಡುಗಡೆ ಮಾಡತಕ್ಕದ್ದು ಇದೆ. ಈಗಾಗಲೇ ಬಡವರೆಲ್ಲ ಹೆಂಚುಗಳನ್ನು ಹಾಕಿಕೊಂಡು ಅವರೆಲ್ಲಾ ಬಹಳ ಕಷ್ಟದಲ್ಲಿದ್ದಾರೆ. ತಪ್ಪಲೆ ಚಂಬುಗಳನ್ನೆಲ್ಲಾ ಅವರುಗಳು ಅಡವಿಟ್ಟು ನಿಮ್ಮ ಸರ್ಕಾರಕ್ಕೆ ಶಾಪ ಹಾಕುತ್ತಿದ್ದಾರೆ. ಆ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಾ ಕೊನೆಯದಾಗಿ ನನ್ನ ಉಪ ಪ್ರಶ್ನೆ ಏನು ಎಂದರೆ ಇವರು ಟ್ರೆಜರಿ ಬ್ಯಾನ್ ಹಾಕುತ್ತಾ ಇರತಕ್ಕದ್ದು ನಿಜ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಧಾರವಾಡದಲ್ಲಿ, ಸೋಮವಾರ ಪೇಟೆಯಲ್ಲಿ ಸಣ್ಣ ಗುತ್ತಿಗೆದಾರರು ಎಲ್ಲಾ ಸ್ಟೈಕ್ ಮಾಡುತ್ತಿದ್ದಾರೆ. ಮೊನ್ನೆ ನಾನು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ಧಾರವಾಡಕ್ಕೆ ಹೋದಾಗ 1200, 1300 ರೂಪಾಯಿಗಳ ಚೆಕ್ ನಾವು ಟ್ರೆಜರಿಗೆ ತೆಗೆದುಕೊಂಡು ಹೋಗಿ ಇಟ್ಟರೆ ಹಣ ನಮಗೆ ಸಿಗುತ್ತಿಲ್ಲ ಎಂದು ಸೋಮವಾರಪೇಟೆಯಲ್ಲಿ ಧಾರವಾಡದಲ್ಲಿ ಧರಣಿ ಕುಳಿತುಕೊಂಡಿದ್ದಾರೆ. ಕಾರಣ ಏನು ಇದಕ್ಕೆ? ನನಗೆ ತಿಳುವಳಿಕೆ ಇರುವ ಹಾಗೆ ಇವರು ದೊಡ್ಡ ಹಣವನ್ನು ಬಿಡುಗಡೆ ಮಾಡಲಿಕ್ಕೆ ಆಗುತ್ತಿಲ್ಲ. ಬಂದಿರತಕ್ಕ ಸ್ವಲ್ಪ ಹಣವನ್ನು ದೊಡ್ಡ ಗುತ್ತಿಗೆದಾರರಿಗೆ ಬಿಡುಗಡೆ ಮಾಡುತ್ತಿದ್ದಾರೆ. ಮೊನ್ನೆ ಇರಿಗೇಷನ್ ಡಿಪಾರ್ಟ್‌ಮೆಂಟಿಗೆ ಇವರು ಹತ್ತು ಕೋಟಿ

ರೂಪಾಯಿಗಳನ್ನು ರಿಲೀಸ್ ಮಾಡಿದ್ದಾರೆ. ಇವರೇ ಇಂಡಿಕೇಟ್ ಮಾಡಿದ್ದಾರೆ, ಇಂತಿಂಥ ಕಂಟ್ರಾಕ್ಟರ್ಗೆ ಅಥವಾ ಇಂತಿಂಥ ಏಟಂಗೆ ನೀವು ಇಷ್ಟಷ್ಟು ಹಣವನ್ನು ರಿಲೀಸ್ ಮಾಡಬಹುದು ಸಣ್ಣ ಸಣ್ಣ ಕಂಟ್ರಾಕ್ಟರ್ಗಳ ದುಡ್ಡು ಇಲ್ಲದೆ ಆರು ತಿಂಗಳಿಂದ ಎಂಟು ತಿಂಗಳಿಂದ ಸಫರ್ ಮಾಡುತ್ತಿದ್ದಾರೆ. ಆದ್ದರಿಂದ ನಾನು ಏನು ಹೇಳುತ್ತಿದ್ದೇನೆ ಎಂದರೆ ನಿಮ್ಮ ಟ್ರೆಜರಿ ಬ್ಯಾಂಕ್ರಫ್ಟ್ ಏನು ಹೇಳುತ್ತಿದ್ದೀರಿ ಅದನ್ನು ನೀವು ಒಪ್ಪಿಕೊಳ್ಳಿ ದುಡ್ಡು ಇಲ್ಲ ಎನ್ನುವ ಮಾತನ್ನಾದರೂ ಹೇಳಿ. ಕೊನೆಯಪಕ್ಷ ಅವರು ಕೆಲಸ ಮಾಡತಕ್ಕದ್ದನ್ನು ಆದರೂ ನಿಲ್ಲಿಸುತ್ತಾರೆ. ಕೊನೆಯದಾಗಿ ನನ್ನ ಉಪ ಪ್ರಶ್ನೆ. ಬಜೆಟ್ನಲ್ಲಿ ಕಳೆದ ಸಾರಿ ನಾವೇನು ಹಣವನ್ನು ಅಪ್ರೂವ್ ಮಾಡಿದ್ದೇವೆ. ಆ ಅಪ್ರೂವ್ ಮಾಡಿರತಕ್ಕ ಒಂದು ಕಾಮಗಾರಿ ಸಹ ಪ್ರಾರಂಭ ಆಗಿಲ್ಲ, ಯಾರಾದರೂ ಶಾಸಕರು ಹೇಳಲಿ. ಎಲ್ಲಾದರಲ್ಲಿಯೂ ದುಡ್ಡು ಇಲ್ಲ, ದುಡ್ಡು ಇಲ್ಲ ಎಂದು ಹೇಳುತ್ತಿದ್ದಾರೆ. ಹಾಗಾದರೆ ಏಕೆ ನೀವು ಇದನ್ನು ಒಪ್ಪಿಕೊಳ್ಳುವುದಕ್ಕೆ ತಯಾರು ಇಲ್ಲ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಲೇಟಿಸ್ಟ್ ಪೊಸಿಷನ್ ಹೇಳುತ್ತೇನೆ. ಜನವರಿ 94ರವರೆಗೆ ಎಷ್ಟು ರಿಲೀಸ್ ಆಗಿದೆ, ಆ ಪಟ್ಟಿ ನನ್ನಲ್ಲಿದೆ. ಇರಿಗೇಷನ್ಗೆ 1993-94 ಯೋಜನೆಯಲ್ಲಿ ಮತ್ತು ಯೋಜನೇತರದಲ್ಲಿ 821 ಕೋಟಿ ರೂಪಾಯಿ ಬಿಡುಗಡೆ ಆಗಬೇಕಾಗಿತ್ತು, ನಾವು ಜನವರಿ ಇವತ್ತಿನವರೆಗೆ 427 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಪಿಡಬ್ಲ್ಯುಡಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಬೇರೆ ಹೊಂದಾಣಿಕೆ ಆದುದು 260 ಕೋಟಿ ರೂಪಾಯಿ, ಅದರಲ್ಲಿ 122 ಕೋಟಿ ರೂಪಾಯಿ ಇವತ್ತಿನವರೆಗೆ ನಾವು ಬಿಡುಗಡೆ ಮಾಡಿದ್ದೇವೆ.

ಅನಂತರ ಜಿಲ್ಲಾ ಪರಿಷತ್ ಸೆಕ್ಟರ್ನಲ್ಲಿರುವ ಗ್ರಾಮೀಣಾಭಿವೃದ್ಧಿ ಯೋಜನೆಗೆಂದು ಇರತಕ್ಕಂಥ 1414 ಕೋಟಿ ರೂಪಾಯಿಗಳಲ್ಲಿ ನಾವು 1085 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಮತ್ತು ವಸತಿ ಗೃಹ ನಿರ್ಮಾಣಕ್ಕೆ ಸಂಬಂಧಿಸಿದಂತೆ ಇರುವ ಒಟ್ಟು 165 ಕೋಟಿ ರೂಪಾಯಿಗಳ ಯೋಜನಾ ಗಾತ್ರದಲ್ಲಿ ಜನವರಿ, 1994ರಿಂದೀಚೆಗೆ 69 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ವಿದ್ಯುತ್ ವಲಯಕ್ಕೆ ಸಂಬಂಧಿಸಿದಂತಿರುವ 663 ಕೋಟಿ ರೂಪಾಯಿಗಳ ಯೋಜನೆಯಲ್ಲಿ ಕರ್ನಾಟಕ ವಿದ್ಯುತ್ ನಿಗಮಕ್ಕೆ ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ 360 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ತಮಗೆ ಗೊತ್ತಿರುವಂತೆ ಕೆಇಬಿ ಮತ್ತು ಕೆಪಿಸಿಗಳು ತಮ್ಮಲ್ಲಿರುವ ಬಂಡವಾಳದಿಂದಲೇ ಖರ್ಚು ಮಾಡಿ ಉತ್ಪಾದನೆ ಮಾಡುತ್ತವೆ. ಸರ್ಕಾರದಿಂದ ಅದಕ್ಕೆ ಎಷ್ಟು ಹಣ ಬಿಡುಗಡೆ ಮಾಡಬೇಕಾಗಿತ್ತೋ ಅಷ್ಟನ್ನು ಮಾಡಿದ್ದೇವೆ. ಆದರೆ, ಕೆಇಬಿ ಮತ್ತು ಕೆಪಿಸಿಗೆ ಸಂಬಂಧಿಸಿದ ಯೋಜನೆಗಳಲ್ಲಿ ವಿಶ್ವಬ್ಯಾಂಕ್ ಕೆಲವು ಅಂಶಗಳನ್ನು ಅಮಾನತ್ತುಗೊಳಿಸಿದೆ. ಅಮಾನತ್ತು ಮಾಡಿರುವುದಕ್ಕೆ ಕೆಲವು ಸಮಸ್ಯೆಗಳಿವೆ. ಏನೆಂದರೆ, ಮುಖ್ಯವಾಗಿ ನೀರಾವರಿ ಪಂಪುಸೆಟ್ಟುಗಳಿಗೆ ಸಂಬಂಧಿಸಿದಂತೆ ದರವನ್ನು ಏರಿಸಬೇಕೆಂದು ವಿಶ್ವಬ್ಯಾಂಕ್ನವರು ಒತ್ತಾಯಿಸುತ್ತಿದ್ದಾರೆ.

ಆದರೆ, ನಾವು ಸದ್ಯಕ್ಕೆ ಏರಿಸಲಿಲ್ಲ. ಈ ಯೋಜನೆಗಳನ್ನು ವಿಶ್ವಬ್ಯಾಂಕಿನವರು ಕೊಡುವ ಸಾಲದಿಂದ ಪುನಶ್ಚೇತನಗೊಳಿಸುವಂತೆಯೂ ಸಹ ನಾವು ಈಗಾಗಲೇ ಕೇಂದ್ರದ ಹಣಕಾಸು ಸಚಿವರಾದ ಶ್ರೀ ಮನಮೋಹನ್ ಸಿಂಗ್ರವರಲ್ಲಿ ವಿನಂತಿಸಿಕೊಂಡಿದ್ದೇವೆ. ಆದರೂ ಕೂಡ ಯೋಜನೆಗಳು ಕುಂಠಿತಗೊಳ್ಳದಂತೆ ಬ್ಯಾಂಕಿನಿಂದ ಬ್ರಿಜ್ ಲೋನ್ ತೆಗೆದುಕೊಳ್ಳುವ ಬಗ್ಗೆ ಬ್ಯಾಂಕಿನ ಅಧಿಕಾರಿಗಳ ಜೊತೆ ಸಮಾಲೋಚಿಸಿದ್ದೇವೆ. ಅಲ್ಲದೆ, ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಕೆಲವು ಅಂಶಗಳನ್ನು ವಿಶ್ವಬ್ಯಾಂಕ್ ಅಮಾನತ್ತುಗೊಳಿಸಿದ್ದರಿಂದ ವಿಶ್ವಬ್ಯಾಂಕಿನಿಂದ ಸಾಲ ಬರುವವರೆಗೆ ಬ್ಯಾಂಕಿನಿಂದ ಎರಡು ಕೋಟಿ ರೂಪಾಯಿಗಳ ಬ್ರಿಜ್ ಲೋನ್ ಅನ್ನು ನೇರವಾಗಿ ಕೆಇಬಿ ಮತ್ತು ಕೆಪಿಸಿಗೆ ತೆಗೆದುಕೊಟ್ಟು ಅವುಗಳನ್ನು ಪುನಶ್ಚೇತನಗೊಳಿಸುವುದಕ್ಕೆ ಸಚಿವ ಸಂಪುಟ ಸಭೆಯಲ್ಲಿ

ಅನುಮೋದನೆ ಪಡೆದುಕೊಳ್ಳಲಾಗಿದೆ. ಇನ್ನು ಹಣ ಬಾಕಿ ಇಟ್ಟುಕೊಂಡಿರುವ ವಿಷಯ ಹೇಳಬೇಕೆಂದರೆ, ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ಸುಮಾರು ಎರಡು ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಬಾಕಿ ಇತ್ತು. ಅದನ್ನು ಈಗ ಕ್ಲಿಯರ್ ಮಾಡುತ್ತಿದ್ದೇವೆ. ಬಾಕಿ ಎಂದರೆ ಎಲ್ಲವೂ ಬಾಕಿ ಇರಲಿಲ್ಲ. ಮೂರು ತಿಂಗಳುಗಳ ಪ್ರೊಸಿಷನ್ ಏನಿತ್ತು ಎಂಬುದರ ಬಗ್ಗೆ ಅಂದರೆ, ನವೆಂಬರ್, ಡಿಸೆಂಬರ್ ಮತ್ತು ಜನವರಿ, 94ಕ್ಕೆ ಸಂಬಂಧಿಸಿದಂತೆ ಅಂಕಿ-ಅಂಶ ಕೊಟ್ಟಿದ್ದೇವೆ. ಪುನಃ ಜನವರಿ ತಿಂಗಳಿನಲ್ಲಿ 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇದು ನೀರಾವರಿ ಮತ್ತು ಕಾಮಗಾರಿ ಎರಡಕ್ಕೂ ಸಂಬಂಧಪಟ್ಟಿದ್ದುದು. ಆದುದರಿಂದ, ಹಣವನ್ನು ಖರ್ಚು ಮಾಡುವುದರಲ್ಲಿಯೂ ಕೂಡ ನಾವು ಶೇಕಡ 58 ರಷ್ಟು ಯೋಜನಾ ಗಾತ್ರವನ್ನು on certain assumptions ಆ ಕಾಲದಲ್ಲಿ ಹೆಚ್ಚು ಮಾಡಿದ್ದೇವೆ. ಉಳಿದ ವಿಷಯಗಳನ್ನು ಅದರ ವಿವರ ಬಂದಾಗ ಹೇಳುತ್ತೇನೆ. ಈಗ ಸಮಯಾವಕಾಶ ಕಡಿಮೆ ಇರುವುದರಿಂದ ನಾನು ವಿವರ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರದಿಂದ ಉದ್ಭವವಾಗತಕ್ಕ ಪ್ರಶ್ನೆಯೇನೆಂದರೆ, ಇದುವರೆವಿಗೂ ಇವರು ಕೊಟ್ಟಿರತಕ್ಕಂಥ ಅಂಕಿ-ಅಂಶಗಳ ಪ್ರಕಾರ ಶೇಕಾಡ 40ರಿಂದ 45ರಷ್ಟು ಮಾತ್ರ ಹಣ ಬಿಡುಗಡೆಯಾಗಿದೆ. ನಾನು ಪ್ರಶ್ನೆ ಕೇಳತಕ್ಕಂಥ ಮೂಲ ಉದ್ದೇಶವೇನೆಂದರೆ, ಇವ್ಹೊತ್ತಿನ ಸರ್ಕಾರದ ಹಣಕಾಸಿನ ಪರಿಸ್ಥಿತಿ ಹೇಗಿದೆಯೆಂಬುದನ್ನು ತಾವು ಬಹಿರಂಗವಾಗಿ ಒಪ್ಪಿಕೊಂಡಿದ್ದೀರಿ. ಕೊನೇ ಪಕ್ಷ ತಾವು ಒಂದು ಆಶ್ವಾಸನೆ ಕೊಡುವುದಕ್ಕೆ ಸಾಧ್ಯವೇ? ಏನೆಂದರೆ, ಮಂಡಲಗಳಲ್ಲಿ ವಾರ್ಷಿಕ ಯೋಜನೆ ಮಾಡಿಕೊಂಡಿದ್ದಾರೆ. ಇವರು ಕೊಡತಕ್ಕಂಥಾದ್ದು 3-4 ಲಕ್ಷ ರೂಪಾಯಿಗಳು ಮಾತ್ರ. ಅವರು ಈಗಾಗಲೇ ಕೆಲಸವನ್ನು ಪ್ರಾರಂಭ ಮಾಡಿದ್ದು, ಸುಮಾರು ಆರು ತಿಂಗಳಿನಿಂದ ಅಲ್ಲಿ ಕೆಲಸಗಳನ್ನು ಕೈಗೊಂಡ ಸಣ್ಣ ಗುತ್ತಿಗೆದಾರರಿಗೆ ಒಂದರಿಂದ ಒಂದೂವರೆ ಸಾವಿರ ರೂಪಾಯಿಗಳ ಚೆಕ್ ಸಹ ಬಿಡುಗಡೆ ಮಾಡತಕ್ಕಂಥ ಯೋಗ್ಯತೆ ಈ ಸರ್ಕಾರಕ್ಕಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡತಕ್ಕಂಥಾದ್ದು ಏನೆಂದರೆ, ನೀವು ಏನು ಟ್ರೆಜರಿ ಬ್ಯಾನ್ ಮಾಡುತ್ತೀರಿ, ಟ್ರೆಜರಿ ಬ್ಯಾನ್ ಮಾಡುವಂಥ ಸಂದರ್ಭದಲ್ಲಿ ಆಕ್ಷನ್ ಪ್ಲಾನ್ ಅನ್ನು ಕಟ್ ಮಾಡಿ ಆಯಾ ಕೆಲಸಗಳನ್ನು ಅಲ್ಲಲ್ಲಿಯೇ ನಿಲ್ಲಿಸಿ ಎಂದು ಹೇಳಿದ್ದೀರಿ. ಈ ಕುರಿತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಎಲ್ಲಾ ಬಿ.ಡಿ.ಓ.ಗಳಿಗೆ ಸೂಚನೆ ಹೋಗಿದೆ. ಆದುದರಿಂದ, ನಾನು ಕೇಳುವುದೇನೆಂದರೆ, ಟ್ರೆಜರಿ ಬ್ಯಾನ್ನಿಂದ ಏನು ರೂ. 500, 800, 1,000 ಗಳ ಬಿಲ್ ಪಾಸ್ ಆಗದೆ ಕೆಲಸಗಳು ನಿಂತುಹೋಗಿದೆ, ಕೊನೆಯ ಪಕ್ಷ ಬ್ಯಾನ್ ಅನ್ನು ಲಿಫ್ಟ್ ಮಾಡುವುದಕ್ಕೆ ತಮ್ಮಿಂದ ಸಾಧ್ಯವೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗಾಗಲೇ ತಮಗೆ ಗೊತ್ತಿರುವಂತೆ ಗ್ರಾಮೀಣಾಭಿವೃದ್ಧಿಯ ಯೋಜನಾ ಗಾತ್ರವಾದ ರೂ. 1414 ಕೋಟಿಗಳಲ್ಲಿ ಈಗಾಗಲೇ 1085 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

ಅಂದರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಾವುದೇ ಆಗಲಿ ತಡೆಯಾಗತಕ್ಕಂಥ ಸಾಧ್ಯತೆ ಇಲ್ಲ. ನೀವೂ ಸರ್ಕಾರವನ್ನು ನಡೆಸಿದ್ದೀರಿ, ಎಲ್ಲಾದರೊಂದು ಕಡೆ ವೇಸ್ ಅಂಡ್ ಮೀನ್ಸ್ ಹೆಚ್ಚು ಕಡಿಮೆಯಾದರೂ ಕೂಡ ಅಲ್ಲಿ ಸರಿಯಾದ ಹೊಂದಾಣಿಕೆಯನ್ನು ನಾವು ಮಾಡಿಕೊಳ್ಳುತ್ತೇವೆ. ಆದ್ದರಿಂದ ಆಕ್ಷನ್ ಪ್ರೋಗ್ರಾಮನ್ನು ನಾವು ಅನುಷ್ಠಾನ ಮಾಡಲು ಏನಾದರೂ ತೊಂದರೆಯಾಗುವ ಬಗ್ಗೆ ತಮ್ಮಲ್ಲಿ ದಾಖಲೆ ಇದ್ದರೆ ಹೇಳಿ. ಆ ವಿಚಾರ ನಮಗೆ ಗೊತ್ತಿಲ್ಲ. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಾವುದಕ್ಕು ಸಹ ಹಣದ ಕೊರತೆ ಆಗಲು ಸಾಧ್ಯತೆ ಇಲ್ಲ. ಏಕೆಂದರೆ we have released a substantial amount. ನಾವೀಗ ಪ್ರತಿಯೊಂದು ಮಂಡಲಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ಹೇಳುತ್ತಿರತಕ್ಕದ್ದು ಹೊಸದಾಗಿ ಆಗಿರುವ ಮಂಡಳಗಳಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುವ ಬಗ್ಗೆ. ಯಾರೋ ಅಧಿಕಾರಿಗಳು ಬರದು ಕೊಟ್ಟಿರುವ ಉತ್ತರವನ್ನು ದಯಮಾಡಿ ನೀವು ಓದಲು ಹೋಗಬೇಡಿ. ನಿನ್ನೆಯ ದಿನ ತಾನೇ 125 ತಾಲ್ಲೂಕುಗಳಲ್ಲಿ ನೀವು ಬ್ಯಾನ್ನು ಮಾಡಿ ಆಕ್ಷನ್ ಪ್ಲಾನ್ನು ಇಂಪ್ಲಿಮೆಂಟ್ ಮಾಡಬೇಡಿ ಎಂದು ಸೂಚನೆಯನ್ನು ಕೊಟ್ಟಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಪ್ರತಿವರ್ಷವೂ ಸಹ ಪರ್ಫಾಮೆನ್ಸ್ ಬಜೆಟನ್ನು ಕೊಡಬೇಕೆಂದು ಕೇಳುತ್ತಿದ್ದೇವೆ, ಆದರೆ ಕೊಡುತ್ತಿಲ್ಲ I must be thankful to my friend. ಆದರೆ ಒಂದು ದೃಷ್ಟಿಯಿಂದ ಪರ್ಫಾಮೆನ್ಸ್ನ ಒಂದು ಪಕ್ಷಿನೋಟ ನಮಗೆ ಇಲ್ಲಿ ಸಿಕ್ಕಿದೆ. ನೀರಾವರಿಗೆ ಮತ್ತು ವಿದ್ಯುಚ್ಛಕ್ತಿಗೆ ಇದುವರೆಗೆ ಖರ್ಚಾಗಿರತಕ್ಕದ್ದು ಇವರು ಕೊಟ್ಟಿರುವ ಮಾಹಿತಿಯ ಪ್ರಕಾರ 50 ಪರ್ಸೆಂಟ್. Hardly we have two months to go ahead. ಮುಖ್ಯಮಂತ್ರಿಗಳು ಎಲ್ಲಾ ಸಭೆಗಳಿಗೆ ಹೋಗಿ ಕೊನೆಯವರೆಗೆ ಒಂದು ಬಿಡಿಗಾಸನ್ನು ಬಿಡದೆ ಎಲ್ಲವನ್ನೂ ಖರ್ಚು ಮಾಡುತ್ತೇವೆಂದು ಹೇಳುತ್ತಾರೆ. ಇವರಿಗೆ ಉಳಿದಿರುವ ಎರಡು ತಿಂಗಳಿನಲ್ಲಿ 50 ಪರ್ಸೆಂಟ್ ಹಣವನ್ನು ಖರ್ಚು ಮಾಡಲು ಸಾಧ್ಯವೇ? ಇದು ಒಂದು. ಎರಡನೆಯದಾಗಿ, ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ಗುತ್ತಿಗೆದಾರರು ಎಷ್ಟರಮಟ್ಟಿಗೆ ಬೆನ್ನತ್ತಿದ್ದಾರೆಂದರೆ, ಶಿವಮೊಗ್ಗ ಜಿಲ್ಲೆಯೊಂದರಲ್ಲಿಯೆ 3 ಕೋಟಿ ರೂಪಾಯಿಗಳಷ್ಟು ಎಲ್.ಓ.ಸಿ. ಕೊಡದೆ ಹಣ ಬಿಡುಗಡೆಯಾಗಿಲ್ಲ. ಇಲ್ಲಿ ಅವರು ಹೇಳಿರತಕ್ಕ ಲೆಕ್ಕದಂತೆ 4950 ಕೋಟಿ ಬಾಕಿ, ಇವರು ಬಿಡುಗಡೆ ಮಾಡಿರತಕ್ಕ ಹಣ 4024 ಕೋಟಿ. ಅಂದರೆ ಖರ್ಚು ಮಾಡಿರತಕ್ಕ ಹಣಕ್ಕಿಂತ ಶೇಕಡಾ 50ರಷ್ಟು ಕಡಿಮೆ. ಆದ್ದರಿಂದ ಗುತ್ತಿಗೆದಾರರೇನು ಮಾಡಬೇಕು? ನಾವು ತಮ್ಮ ಅನುಮತಿಯ ಮೇರೆಗೆ ಇಲ್ಲಿ ಬಜೆಟನ್ನು ಪಾಸ್ ಮಾಡುತ್ತೇವೆ. ಆ ರೀತಿ ಮಾಡಿದಂಥ ಬಜೆಟಿನ ಗತಿ ಏನು?

ಇನ್ನೊರಡು ತಿಂಗಳಿನಲ್ಲಿ ಆ ಕೆಲಸವನ್ನು ಮುಗಿಸಲು ಇವರಿಗೆ ಸಾಧ್ಯವೆ? ಆದು ನೀರಾವರಿ ಇರಬಹುದು, ಪವರ್ ಸೆಕ್ಟಾರ್ ಇರಬಹುದು, ಅದಿರಲಿ ಸಾಮಾನ್ಯ ಕೆಲಸಗಳಾದ ರಸ್ತೆ ರಿಪೇರಿ ಕಾಮಗಾರಿ ಮಾಡಿರತಕ್ಕದ್ದು, ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ಸಣ್ಣಪುಟ್ಟ ಕಾಮಗಾರಿಗಳನ್ನು ಮಾಡಿರತಕ್ಕದ್ದು I want a specific reply from the Hon. Chief Minister on these questions.

ಶ್ರೀ ಎಂ. ವೀರಪ್ಪ ಮೊಯಿಲಿ : ನೀರಾವರಿಗೆ ಅಥವಾ ಇನ್ನಿತರೆ ಯಾವುದೇ ಬಾಬಿಗಾಗಲಿ ನಾವೇನು ಭರವಸೆಯನ್ನು ಕೊಟ್ಟಿದ್ದೇವೋ, ಯಾವ ಯಾವ ಪ್ರಮುಖವಾದಂಥ ಬಾಬಿನಲ್ಲಿ ಖರ್ಚು ಮಾಡಬೇಕೆಂದು ಯೋಜನೆಯನ್ನು ಹಾಕಿದ್ದೇವೋ ಅದನ್ನು ಪೂರ್ಣವಾಗಿ ಮಾಡಬೇಕೆಂಬುದೇ ನಮ್ಮ ಆಸೆ, ಆ ಆತ್ಮವಿಶ್ವಾಸ ನಮಗಿದೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ಆತ್ಮವಿಶ್ವಾವಿದೆ, ಅಭಿಮಾನವಿದೆ, ಆಸೆಯೂ ಇದೆ, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ, ಆದರೆ ಅದನ್ನು ಮಾಡಲು ಹಣವಿಲ್ಲವಲ್ಲಾ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಹಾಗಾದರೆ ನಾವಿಲ್ಲಿ ಸುಮ್ಮನೆ ಪ್ರಶ್ನೆ ಕೇಳುತ್ತೇವೆಯೇ? ನಾವೇನು ಪ್ರಚಾರಕ್ಕೆ ಪ್ರಶ್ನೆ ಕೇಳುತ್ತೇವೆಯೇ? ಸರ್ಕಾರದಿಂದ ಏನಾದರೂ ಉತ್ತರಬೇಡವೇ? I want to specific reply. Within two months, can they spend the remaining 50% on core sectors like Irrigation and Power?

ಶ್ರೀ ಎಂ. ವೀರಪ್ಪ ಮೊಯಿಲಿ : ಇದರ ಬಗ್ಗೆ ಎಲ್ಲಾ ರೀತಿಯಾದ ಪಕ್ಷಿನೋಟವನ್ನು ಮುಂದೆ ಬರುತ್ತಿರುವ ಬಜೆಟಿನಲ್ಲಿ ಕೊಡುತ್ತೇನೆ. ಬೇಕಾದರೆ ಏಪ್ರಿಲ್ನಿಂದ

ಅಕ್ಟೋಬರ್‌ವರೆಗಿನ ಕಂಪ್ಯಾರಿಟೀವ್ ಫಿಗರ್ಸನ್ನು ಈಗ ಕೊಡುತ್ತೇನೆ. ಉದಾಹರಣೆಗೆ, ಭಾರತ ಸರ್ಕಾರವನ್ನು ಬಿಟ್ಟು ಪ್ಲಾನ್ ಎಕ್ಸೆಂಡಿಚರ್‌ನಲ್ಲಿ ಗ್ರಾಸ್ ಎಕ್ಸೆಂಡಿಚರ್ 1992-93ರಲ್ಲಿ 3304.37 ಕೋಟಿ ರೂಪಾಯಿಗಳನ್ನು ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಖರ್ಚು ಮಾಡಿದ್ದೇವೆ. 1993-94ರಲ್ಲಿ 3746.85 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದು ಒಟ್ಟು ಗ್ರಾಸ್. ಇದರಲ್ಲಿ ಇನ್‌ಫ್ಲೇಷನ್ ಏನೂ ಆಗಿಲ್ಲ. ಅದು 5.6 ಪರ್ಸೆಂಟ್. It was 17% earlier. For 92-93, we have spent Rs. 777 crores as on October. For 93-94, we have spent Rs. 928 crores. We have spent money.

ಅಫ್ಫೋರ್ಸ್ ಯೋಜನೆಯ ಗಾತ್ರ ದೊಡ್ಡದಿದೆ. ನಾನು ಅದನ್ನು ಎರಡು ಮೂರು ಸಲ ರೆವ್ಯೂ ಮಾಡಿದ್ದೇನೆ. ಆ ರೀತಿ ರೆವ್ಯೂ ಮಾಡಿದಮೇಲೆ ಪ್ಲಾನನ್ನು ಕಟ್ ಮಾಡತಕ್ಕ ಒಂದು ನಿರ್ಣಯವನ್ನು ನಾನು ತೆಗೆದುಕೊಂಡಿಲ್ಲ. The very fact that I have not taken a decision goes to show that we are trying to mobilise resources.

ತಮಗೆ ಗೊತ್ತಿರುವ ಹಾಗೆ ಜನವರಿ, ಫೆಬ್ರವರಿ ಮಾರ್ಚ್ ಈ ಮೂರು ತಿಂಗಳುಗಳು ಸಂಪನ್ಮೂಲಗಳನ್ನು ಕ್ರೋಢೀಕರಿಸಲು, ಹೆಚ್ಚು ಹೆಚ್ಚು ಮೊಬಿಲೈಸ್ ಮಾಡಲು ಪೀಕ್ ಅವಧಿ. ಯಾವುದೇ ವರ್ಷವನ್ನು ತೆಗೆದುಕೊಂಡರೂ ಕೂಡ ಪ್ಲಾನ್ ಎಪ್ಸ್‌ಪೆಂಡಿಚರ್‌ನಲ್ಲಿ ಎಪ್ಸ್‌ಪೆಂಡಿಚರ್ ಬಹಳ ಉನ್ನತಮಟ್ಟದಲ್ಲಿ ಹೋಗತಕ್ಕದ್ದು ಈ ಮೂರು ತಿಂಗಳಿನಲ್ಲಿ ಆದುದರಿಂದ No one need become panicky. Of course, estimation must have gone wrong.

ಶ್ರೀ ವಾಟಾಳ್ ನಾಗರಾಜ್ : ವಾಸ್ತವಿಕ ಸ್ಥಿತಿಯನ್ನು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಇದೆಲ್ಲಾ Audited Accounts from Accountant General ನಮಗೆ ಯಾವುದನ್ನೂ ಅಡಗಿಸತಕ್ಕ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಬಂಡವಾಳವಿದ್ದರೆ ಇದೆ ಎಂದು ಹೇಳಿ, ಇಲ್ಲದಿದ್ದರೆ ಇಲ್ಲವೆಂದು ಹೇಳಿ. ಅದರಲ್ಲೇನು?

11.40 ಎ.ಎಂ

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಕೂಡ ಶೇ. 17 ಇನ್ಫ್ಲೇಷನ್ 5.6 ಶೇಕಡ ಆಗಿದ್ದರೂ ಕೂಡ ನಾವು 400 ಕೋಟಿ ರೂಪಾಯಿಗಳು ಕಳೆದ ವರ್ಷಕ್ಕಿಂತ ನಾವು ಹೆಚ್ಚು ಖರ್ಚು ಮಾಡಬೇಕಾದರೆ ಪ್ರಯತ್ನ ಇಲ್ಲದೆ ಏನೂ ಆಗುತ್ತಿರಲಿಲ್ಲ. 400 ಕೋಟಿಗೂ ಜಾಸ್ತಿ ನಾವು ಪ್ಲಾನಿಂಗ್ ಮತ್ತು ನಾನ್ ಪ್ಲಾನಿಂಗ್ನಲ್ಲಿ ಎರಡಕ್ಕೂ ಕೂಡಿ ಖರ್ಚು ಮಾಡಿದ್ದೇವೆ. ಪ್ಲಾನ್ನಲ್ಲೂ ಅಷ್ಟೇ ನಾವು ಕಡಿಮೆ ಖರ್ಚು ಮಾಡಲಿಲ್ಲ. ಶೇ. 30ರಷ್ಟು ಗ್ರೋಥ್ರೇಟ್ ನಾವು ಮೇಂಟೇನ್ ಮಾಡಿದ್ದೇವೆ. ಶೇ. 58 ಗ್ರೋಥ್ ರೇಟನ್ನು ಬಹುಶಃ ನಮ್ಮ ಇಡೀ ರಾಷ್ಟ್ರದಲ್ಲೇ ಇಲ್ಲದಂತಹ ಗ್ರೋಥ್ ರೇಟ್ ನಾವು ಮಾಡಬೇಕೆಂದು ಅಪೇಕ್ಷೆ ಇಟ್ಟಿದ್ದೇವೆ. ಆದರೆ ಶೇ. 80ರಷ್ಟು ಹೆಚ್ಚು ಮಾಡಿದರೆ ನಮ್ಮ ಫರ್ಫಾರಮೆನ್ಸ್ ಇಡೀ ದೇಶದಲ್ಲಿ ದಾಖಲಾಗುತ್ತದೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನೀವು ನನ್ನನ್ನು ಕರೆದಿದ್ದೀರಿ. It is very important. It is misleading. I want to show.

ಮಾನ್ಯ ಮುಖ್ಯಮಂತ್ರಿಗಳೇ, ಶ್ರೀ ಪಿ.ಜಿ.ಆರ್. ಸಿಂಧ್ಯಾರವರ ಪ್ರಶ್ನೆಗೆ 3Ë1Ë94ಕ್ಕೆ ಉತ್ತರ ಕೊಡುವಾಗ 31ನೇ ಡಿಸೆಂಬರ್ 1993ನೇ ದಿನ 124.25 ಕೋಟಿ ಪೆಂಡಿಂಗ್ ಇದೆ ಎಂದು ಹೇಳಿದ್ದೀರಿ. ಇವತ್ತು ತಾವು ಉತ್ತರ ಕೊಡುತ್ತೀರಿ. ಅದು ಏನೆಂದರೆ ಕಳೆದ ಮೂರು ತಿಂಗಳಲ್ಲಿ ಅಂದರೆ ಜನವರಿ ತನಕ ರಿಲೀಜ್ ಆಗಿದ್ದ ಹಣ ಪಬ್ಲಿಕ್ ವರ್ಕ್ಸ್‌ಗೆ 4 ಕೋಟಿ, ಇರಿಗೇಷನ್ಸ್‌ಗೆ 13 ಕೋಟಿ ಅಂದರೆ 18 ಕೋಟಿ ರೂಪಾಯಿಗಳು, ಪೆಂಡಿಂಗ್ ಇದ್ದ ಬಿಲ್ 18 ಕೋಟಿ ಹಾಗಾದರೆ, 120 ಕೋಟಿ ಡಿಸೆಂಬರ್ವರೆಗೆ ಪೆಂಡಿಂಗ್ ಬಿಲ್ ಇದ್ದು ಪೇಮೆಂಟ್ 130-140 ಕೋಟಿ ಆದರೆ ಇದು ಹಿಂದಿನ ಬಾಕಿ ಎಂದು ಒಪ್ಪಿಕೊಳ್ಳುವ ಸಾಧ್ಯತೆ ಇದೆ. ಡಿಸೆಂಬರ್ನಲ್ಲಿದ್ದ 120 ಕೋಟಿ ಬಾಕಿ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಹಣವೇ ಬಿಡುಗಡೆ ಆಗಿಲ್ಲ. ಅಂದರೆ 18 ಕೋಟಿ ಹೇಗೆ ಬಂತು? ನೀವು ಏನು ಮ್ಯಾಜಿಕ್ ಮಾಡಿದ್ದಿರೋ? ಎಂದು ಕೇಳಬೇಕಾಗುತ್ತದೆ. ಇದು ಮೊದಲನೆಯದು, ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗಾಗಲೇ ಶ್ರೀ ಚಂದ್ರೇಗೌಡರು ಈ ಪ್ರಶ್ನೆಯನ್ನು ಕೇಳಿದ್ದಾರೆ. ಇರಿಗೇಷನ್ ಮತ್ತು ಪವರ್ ಸೆಕ್ಟರ್ನಲ್ಲಿ ಕೇವಲ ಶೇ. 50ರಷ್ಟು ಇವತ್ತು ಹಣ ಖರ್ಚಾಗಿದೆ. ಆಶ್ರಯ ಯೋಜನೆಯಲ್ಲಿ ಶೇ. 40ರಷ್ಟು ಈಗ ಹಣ ಬಿಡುಗಡೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಗೊತ್ತಿದೆ. ಆದರೆ ಹಣ ಬಿಡುಗಡೆಯಾಗದೆ ಕೆಲಸ ಮಾಡಲು ಹೇಗೆ ಸಾಧ್ಯವಿದೆ? ಯಾವ ಕೆಲಸ ಕಳೆದ 9-10 ತಿಂಗಳಲ್ಲಿ ಶೇ. 50ರಷ್ಟು ಕೆಲಸ ಮಾಡಲು ಸಾಧ್ಯವಾಗಿಲ್ಲ. ಇಲ್ಲಿ ಎರಡೂ ಇರಬಹುದು. ಒಂದು ವೇಳೆ ಕೆಲಸ ಆಗಿರಬಹುದು, ಪೇಮೆಂಟ್ ಮಾಡುವುದಕ್ಕೆ ಸಾಧ್ಯವಾಗದೆ ಇರಬಹುದು, ಆ ಸಾಧ್ಯತೆಯೂ ಕಡಿಮೆ ಇರಬಹುದು, ಏಕೆಂದರೆ ಕೇವಲ 18 ಕೋಟಿ ರೂಪಾಯಿಗಳ ಪೆಂಡಿಂಗ್ ಇದೆ ಎಂದು ಹೇಳಿದ್ದಾರೆ. ಹಾಗಾದರೆ ಕೆಲಸ ಆಗಿಲ್ಲ ಎಂದ ಹಾಗೆ ಆಯಿತು. ಹಾಗಾದರೆ ವಿದ್ಯುತ್ ಮತ್ತು ನೀರಾವರಿಯಲ್ಲಿ ತಾವು ಹಣ ಬಿಡುಗಡೆ ಮಾಡದೆ ಮಾರ್ಚ್ ಒಳಗೆ ಕೆಲಸ ಮಾಡಲು ಸಾಧ್ಯವಿದೆ ಏನು? ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಮೂರನೆಯದಾಗಿ, ತಾವು ಹಣ ಬಿಡುಗಡೆಯ ಬಗ್ಗೆ ಹೇಳಿದ್ದೀರಿ, ಈ ವರ್ಷ 92-93ನೇ ಇಸವಿಯಲ್ಲಿ ತಾವು 777 ಕೋಟಿ ಹಣ 92-93ನೇ. ಪ್ಲಾನ್ನಲ್ಲಿ ಏಪ್ರಿಲ್ನಿಂದ ಅಕ್ಟೋಬರ್ವರೆಗೆ ರಿಲೀಸ್ ಮಾಡಿದ್ದೀರಿ. ಈ ವರ್ಷ 928 ಕೋಟಿ ರಿಲೀಜ್ ಮಾಡಿದ್ದೀರಿ. ಅದು ಸರಿಯಿರಬಹುದು. ನಾನು ಕೇಳುತ್ತೇನೆ. ಆಗ ಪ್ಲಾನ್ ಗಾತ್ರ 2 ಸಾವಿರ ಕೋಟಿ ಇತ್ತು, ಈಗ ನಿಮ್ಮದು 3 ಸಾವಿರ ಕೋಟಿ ಇದೆ. So, is it proportion to that? It is not proportion to that

ಆದುದರಿಂದ ನೀವು ಫ್ಲೆಲ್ಯೂರ್ ಒಪ್ಪಿಕೊಳ್ಳಬೇಕಾಗುತ್ತದೆ. 4ನೇ ಪ್ರಶ್ನೆ ಸ್ಟೇಟ್ ಪ್ಲಾನಿಂಗ್ ಬೋರ್ಡ್ ಎಂದು ನೀವು ಏನು ಪ್ರಾರಂಭ ಮಾಡಿದ್ದೀರಿ, ಆ ಪ್ಲಾನಿಂಗ್ ಬೋರ್ಡ್ ಸೈಜ್ ನೀವು ರೆಡ್ಯೂಸ್ ಮಾಡಬೇಕು ಎಂದು ತಮಗೆ ಒತ್ತಾಯ ಮಾಡಿದ್ದಾರೆ ಇದು ಸತ್ಯವೊ? ಅಸತ್ಯವೊ?

ಶ್ರೀ. ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ತಮಗೆ ಇಷ್ಟು ಉತ್ತರ ಕೊಡುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ಪ್ರತಿ ವರ್ಷದ್ದು ರಿಸೋರ್ಸಸ್ಸ್ ಮೊಬಲೈಜೇಷನ್, ಎಕ್ಸ್‌ಪೆಂಡಿಚರ್‌ನ ಒಂದು ಡ್ರಾಫ್ಟ್ ಅನ್ನು ತಾವು ದಯಮಾಡಿ ನೋಡಿ. ಅದರ ಮೇಲೆ ಚರ್ಚೆ ಮಾಡೋಣ. ಉದಾಹರಣೆಗೆ 1992-93ರದು ಒಟ್ಟು ಪ್ಲಾನ್ ಫರ್ಫಾರ್ಮೆನ್ಸ್ 1,900 ಕೋಟಿ ರೂಪಾಯಿಗಳು ಮಾಡಿದ್ದೇವೆ. ಆದರೆ ಅಕ್ಟೋಬರ್‌ನ ಒಳಗಡೆ ಆದ ಖರ್ಚು 777 ಕೋಟಿ ರೂ. ಅಂದರೆ ಆಮೇಲೆ 1,123 ಕೋಟಿ ರೂ. ಖರ್ಚು ಪ್ಲಾನಿಂಗ್ನಲ್ಲಿ ಆಯಿತು. ತಾವು ಆ ಡ್ರಾಫ್ಟ್ ನೋಡಬೇಕು. ಯಾವ ಸ್ಟೇಟ್ ಪ್ಲಾನಿಂಗ್ ಬೋರ್ಡ್ನ ಪ್ಲಾನ್ ಕಟ್ ಮಾಡಿ ಎಂದು ಹೇಳಲಿಲ್ಲ. ನಮ್ಮ ಪರಿಸ್ಥಿತಿ ಹೀಗೆ ಇದೆ ಎಂದು ಹಣಕಾಸಿನ ಇಲಾಖೆ

ಒಂದು ನೋಟ್ ಕೊಟ್ಟ ಮೇಲೆ ನಮಗೆ ಪ್ಲಾನ್ ಈ ತರಹ ಕಷ್ಟ ಇದೆ because we have to explain the position, reality ಅಡಗಿಸಬೇಕಾದಂಥ ಅವಶ್ಯಕತೆ ಇಲ್ಲ. State Planning Board consisting of eminent economists.

ಅವರು ಏನು ಹೇಳಿದರು ಅಂದರೆ ನೀವು ಖಂಡಿತವಾಗಿ ಪ್ಲಾನ್ ಅನ್ನು ಕಟ್ ಮಾಡುವಂತಹ ಅವಶ್ಯಕತೆ ಇಲ್ಲ.

ಆ ಪ್ಲಾನ್ನನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ಹೇಳಿ ಶ್ರೀ ಪಿ.ಆರ್. ನಾಯಕ್ರವರ ಅಧ್ಯಕ್ಷತೆಯಲ್ಲಿ ಒಂದು ಸಬ್ ಕಮಿಟಿಯನ್ನು ಮಾಡಿ, ಅವರು ಸದ್ಯದಲ್ಲಿಯೇ ವರದಿ ಕೊಡುವವರಿದ್ದಾರೆ. ನಾವು ಪ್ಲಾನ್ ಕಟ್ ಮಾಡಬೇಕಾದಂತಹ ಅವಶ್ಯಕತೆಯಲ್ಲಿ ಕೆಲವು ಸಜೆಷನ್ಗಳನ್ನು ಕೊಟ್ಟಮೇಲೆ, ಆ ಸಬ್ ಕಮಿಟಿ ಕೂಡ ನಾಯಕ್ರವರ ಅಧ್ಯಕ್ಷತೆಯಲ್ಲಿ ಒಂದು ವರದಿ ಕೊಡುತ್ತಿದೆ. ಅದು ಆದಮೇಲೆ ಅವರ ಕೆಲವು ಸೂಚನೆಗಳಿಗನುಗುಣವಾಗಿ ನಾನೂ ಕೂಡ ಎರಡು ಸಾರಿ ಎಲ್ಲಾ ರೆವಿನ್ಯೂ ಅರ್ನಿಂಗ್ ಡಿಪಾರ್ಟ್ಮೆಂಟನ್ನು 3-4 ಗಂಟೆಗಳ ಕಾಲ ರೆವ್ಯೂ ಮಾಡಿದಮೇಲೆ ನನಗೆ ಬಂದಂತಹ ಆತ್ಮ ವಿಶ್ವಾಸದಿಂದ ಹೇಳುತ್ತಿದ್ದೇನೆ, ಬೇಕಾದಂತಹ ಕೆಲವು ವಿಚಾರಗಳನ್ನು ನಾವು ನಿರ್ಣಯ ಕೂಡ ತೆಗೆದುಕೊಂಡಿದ್ದೇವೆ. ಕಠಿಣವಾದಂತಹ ನಿರ್ಣಯವನ್ನು ಕೆಲವು ಕಡೆ ತೆಗೆದುಕೊಳ್ಳಬೇಕಾಗಿ ಬಂದಿತು. ಅದನ್ನು ತೆಗೆದುಕೊಂಡಿದ್ದೇವೆ. ಅದರ ಆಧಾರದ ಮೇಲೆ ಹೇಳುತ್ತಿದ್ದೇನೆ, 80 ಪರ್ಸೆಂಟ್ ಪರ್ಫಾರ್ಮ್ ಪ್ಲಾನ್ ಮಾಡಬಹುದು ಎಂದು ಯಾವ ಅಭಿಪ್ರಾಯ ನಮಗೆ ಇತ್ತು ಅದು ಖಂಡಿತವಾಗಿಯೂ ಕೂಡ 80 ಪರ್ಸೆಂಟ್ ಪರ್ಫಾರ್ಮೆನ್ಸ್ಗಿಂತ ಮೇಲೆ ಕೊಂಡು ಹೋಗಿದ್ದೇವೆ.

ಚನ್ನಪಟ್ಟಣಕ್ಕೆ ಸಂಚಾರಿ ಆರಕ್ಷಕ ಠಾಣೆ ಮಂಜೂರಾತಿ.

72 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣ ನಗರಕ್ಕೆ ಟ್ರಾಫಿಕ್ ಪೊಲೀಸ್ ಠಾಣೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದಲ್ಲಿ 3 ವರ್ಷಗಳಿಂದ ಬಾಕಿ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) ಮಂಜೂರಾತಿ ನೀಡದಿರಲು ಕಾರಣಗಳೇನು ಮತ್ತು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಶ್ರೀ ಸಾದತ್ ಆಲಿ ಖಾನ್ : ಮಾನ್ಯ ಸಭಾಪತಿಯವರೇ, ಚನ್ನಪಟ್ಟಣಕ್ಕೆ ಟ್ರಾಫಿಕ್ ಪೊಲೀಸ್ ಸ್ಟೇಷನ್ ಬೇಕಾಗಿರುವುದು ಸರ್ಕಾರಕ್ಕೆ ಪ್ರಪೋಸಲ್ ಇಲ್ಲ ಎಂದು ನಮಗೆ ರಿಪ್ಲೈ ಬಂದಿದೆ. ಅದಕ್ಕೆ during the last 3 years, I am asking for the traffic police station.

ಅದು ಏತಕ್ಕೆ ಎಂದರೆ ನಮ್ಮ ಬಾರ್ಡರ್ ರಾಮನಗರ ಹನುಮಂತರಾಯನ ಗುಡಿಯಿಂದ ಮದ್ದೂರ್ವರೆಗೂ 20 ಕಿಲೋಮೀಟರ್ ಇದೆ. 20 ಕಿಲೋಮೀಟರ್ನಲ್ಲಿ ಎರಡು ಕಡೆಯಾ ಡೆವಲಪ್ಮೆಂಟ್ ಆಗಿಬಿಟ್ಟಿದೆ. ಹೀಗಾಗಿ ನಮ್ಮ ರಾಮನಗರ ಬಾರ್ಡರ್ನ್ನಿಂದ ಮದ್ದೂರ್ವರೆಗೆ ಟ್ರಾಫಿಕ್ ಜಾಸ್ತಿಯಾಗಿ ತಿಂಗಳಿಗೆ 10 ಆಕ್ಸಿಡೆಂಟ್ಸ್ ಆಗುತ್ತದೆ. ನಮ್ಮ